**ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ**

**ನ್ಯಾಯಾಲಯದಲ್ಲಿ, ದಾಂಡೇಲಿ**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ: 201/2017**

**ಚಾ.ಸಾ– 1**

**ಫ್ರಾ.ಸಾ – 1**

**ಸಾಕ್ಷಿಗೆ ದಿನಾಂಕ 02-06-2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿಯ ಹೆಸರು | ಃ ಹಬೀಬ ತಂಃ ಮೋಹಿದ್ದಿನ ಸೈಯ್ಯದ |
| ವಯಸ್ಸು | ಃ 41 ವರ್ಷ |
| ಉದ್ಯೋಗ | ಃ ಖಾಸಗಿ ಕೆಲಸ. |
| ವಾಸಸ್ಥಳ | ಃ ದಾಂಡೇಲಿ |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ**

**1.** ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಯಿತು. ಅದು ದೂರಾಗಿದ್ದು, ಸಾಕ್ಷಿ ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು **ನಿಪಿ-1** ಎಂದು ಗುರುತಿಸಲಾಯಿತು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ-1ಎ** ಎಂದು ಗುರುತಿಸಲಾಯಿತು.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಯಿತು. ಅದು ಸ್ಥಳ ಪಂಚಾನೆಮಯಾಗಿದ್ದು , ಸಾಕ್ಷಿ ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು **ನಿಪಿ-2** ಎಂದು ಗುರುತಿಸಲಾಯಿತು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ-2ಎ** ಎಂದು ಗುರುತಿಸಲಾಯಿತು.

2. ಚಾಸಾ. 4 ಮತ್ತು 5 ರವರ ಪರಿಚಯ ಇದೆ. ಆರೋಪಿ ನನಗೆ ಗೊತ್ತು. ಸುಮಾರು 7-8 ವರ್ಷಗಳ ಹಿಂದೆ ನನ್ನ ಮತ್ತು ಆರೋಪಿ ನಡುವೆ ಕೇವಲ ಬಾಯಿಮಾತಿನಲ್ಲಿ ವೈಮನಸ್ಸು ಉಂಟಾಗಿತ್ತು. ನಮ್ಮಗಳ ನಡುವೆ ಯಾವುದೇ ಜಗಳವಾಗಲೀ ಹೊಡೆದಾಟ ಬಡಿದಾಟವಾಗಿರುವುದಿಲ್ಲ. ಆರೋಪಿ ನನಗೆಅಕ್ರಮ ತಡೆ ಮಾಡಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿಲ್ಲ, ಕೈಯಿಂದ ಅಥವಾ ಯಾವುದೇ ವಸ್ತುವಿನಿಂದ ಹಲ್ಲೆ ಮಾಡಿಲ್ಲ, ಗಾಯಪಡಿಸಿಲ್ಲ. ನನಗೆ ತೀವ್ರ ಸ್ವರೂಪದ ಗಾಯಪಡಿಸಿಲ್ಲ.. ಜೀವ ಬೆದರಿಕೆ ಹಾಕಿಲ್ಲ. ನಾನು ಪೋಲಿಸರಿಗೆ ಯಾವುದೇ

ದೂರು ನೀಡಿರುವುದಿಲ್ಲ. ನಾನು ನಿಪಿ 1 ಕ್ಕೆ ಪೋಲೀಸರ ಹೇಳಿಕೆ ಮೇರೆಗೆ ಸಹಿ ಮಾಡಿರುತ್ತೇನೆ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲಾ. ನ್ಯಾಯಾಲಯದ ಮುಂದೆ ಇರುವ ಒಂದು ಗಾಜಿನ ಬಾಟಲಿಯ ಬಗ್ಗೆ ನನಗೆ ಮಾಹಿತಿ ಇಲ್ಲಾ. ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲ.

**3.** ನಾನು ನಿಪಿ 2 ದಾಖಲೆಗೆ ಪೊಲೀಸ ಠಾಣೆಯಲ್ಲಿ ಪೊಲೀಸರ ಕೋರಿಕೆಯ ಮೇರೆಗೆ ಸಹಿ ಮಾಡಿದ್ದೇನೆ. ಅದರಲ್ಲಿರುವ ಅಂಶಗಳು ನನಗೆ ಗೊತ್ತಿಲ್ಲ.

**(ಮಾನ್ಯ ಸ.ಸ.ಅ ರವರು ಸಾಕ್ಷಿ ಪ್ರತಿಕೂಲವಾಗಿ ಸಾಕ್ಷಿ ನುಡಿದಿದ್ದಾರೆ ಹಾಗಾಗಿ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಘೋಷಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಕೋರಿದ್ದು, ಅನುಮತಿಸಲಾಯಿತು)**

**ಪಾಟೀ ಸವಾಲು ಮಾನ್ಯ ಸ.ಸ.ಅ.ರವರಿಂದ**

**4.** ದಿಃ 09-02-2017 ರಂದು ಸಂಜೆ 04.30 ಗಂಟೆಗೆ ದಾಂಡೇಲಪ್ಪ ಬಾರಿನ ಬಲಕ್ಕೆ ಕಚ್ಚಾ ರಸ್ತೆಯಲ್ಲಿ ಆರೋಪಿಯು ನನ್ನ ಹತ್ತಿರ ತನಗೆ ಕೊಡಬೇಕಾದ ಹಣವನ್ನು ಕೊಡು ಎಂದು ಕೇಳಿದನು ಎಂದರೆ ಸರಿಯಲ್ಲ. ಆಗ ನಾನು ನಾಳೆ ಕೊಡುವುದಾಗಿ ಹೇಳಿದಾಗ ಆರೋಪಿಯು ನನಗೆ ಅವಾಚ್ಯ ಶಬ್ದಗಳಿಂದ ಬೈದನು ಎಂದರೆ ಸರಿಯಲ್ಲ. ನನ್ನನ್ನು ಅಕ್ರಮ ತಡೆ ಮಾಡಿ ಅಲ್ಲಿಯೇ ಇದ್ದ ಸೊಡಾ ಬಾಟಲಿಯಿಂದ ನನ್ನ ಕಣ್ಣಿನ ಹುಬ್ಬಿನ ಮೇಲೆ ಹೊಡೆದನು ಎಂದರೆ ಸರಿಯಲ್ಲ. ನಂತರ ಕೈಯಿಂದ ತಲೆಗೆ ಮೈಯಿಗೆ ಹೊಡೆದು ಗಾಯಪಡಿಸಿದನು ಎಂದರೆ ಸರಿಯಲ್ಲ. ನಂತರ ಜೀವ ಬೆದರಿಕೆ ಹಾಕಿದನು ಎಂದರೆ ಸರಿಯಲ್ಲ. ನಂತರ ನಾನು ಆ ಬಗ್ಗೆ ಚಿಕಿತ್ಸೆ ಪಡೆದು ಆರೋಪಿಯ ವಿರುದ್ಧ ನಿಪಿ 1 ರಂತೆ ದೂರನ್ನು ನೀಡಿದೆನು ಎಂದರೆ ಸರಿಯಲ್ಲ.

**6.** ದಿಃ 10-*02-2017 ರಂದು ನಾನು ತೋರಿಸಿದ ಘಟನಾಸ್ಥಳದಲ್ಲಿ ಪೊಲೀಸರು ನನ್ನ ಮತ್ತು ಚಾಸಾ 2 ಮತ್ತು 3 ರವರ ಸಮಕ್ಷಮ ನಿಪಿ 2 ರಂತೆ ಪಂಚನಾಮೆ ಜರುಗಿಸಿ, ನನ್ನ ಸಹಿ ಪಡೆದಿದ್ದಾರೆ ಎಂದರೆ ಸರಿಯಲ್ಲ. ನಮ್ಮ ಸಮಕ್ಷಮ ಸ್ಥಳದಲ್ಲಿ ಆರೋಪಿತರು ಕೃತ್ಯಕ್ಕೆ ಬಳಸಿದ ಒಂದು ಗಾಜಿನ ಬಾಟಲಿಯನ್ನು ಜಪ್ತು ಮಾಡಿದ್ದಾರೆ ಎಂದರೆ ಸರಿಯಲ್ಲ.

7. ಸದರಿ ಎಲ್ಲಾ ವಿಚಾರಗಳು ಗೊತ್ತಿದ್ದರೂ ಸಹಿತ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಮತ್ತು ಆರೋಪಿ ರಾಜಿ ಮಾಡಿಕೊಂಡಿದ್ದೇವೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ವಕೀಲರು ಏನೂ ಇಲ್ಲ ಅಂತಾ ಹೇಳಿರುತ್ತಾರೆ.**

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೆ.ಸರಿ ಅದೆ.**

ಸಹಿ ಇದೆ

**ದಿವಾಣಿ ನ್ಯಾಯಾಧೀಶರು ಹಾಗೂ**
**ಪ್ರ.ದ.ನ್ಯಾ.ದಂಡಾಧಿಕಾರಿಗಳು,**
**ದಾಂಡೇಲಿ**